MADAM SPEAKER.—The House now stands adjourned to meet again at 1-30 P. M.

The House rose at Twenty five Minutes past Twelve of the Clock and reassembled at Forty two minutes past One of the clock.

(Madam Speaker in the Chair)

STARRED QUESTIONS TO WHICH ORAL ANSWERS WERE GIVEN

PLAY CENTRES AND RECREATIONAL CLUBS FOR CHILDREN IN DAVANAGERE CITY

196. SMT. C. NAGAMMA KESHAVA MURTHY (Davanagere).—

Will the Minister for Community Development and Social Welfare be pleased to state.

(a) whether there is any proposal before the Government to start Play Centres and recreational clubs for children residing in slum and under-privileged areas in Davanagere City under the programme of non-institutional services of the Juvenile Service Bureau ;

(b) the names of other places where the programme has been introduced ; the number of beneficiaries and the amount spent on this scheme ?

SRI N. RACHAIAH (Minister for Community Development and Social Welfare).—

(a) Yes.

(b) Five Play Centres and Recreational Clubs have been started at Bangalore. The daily average number of beneficiaries in these centres is 350. The expenditure on these centres during 1972-73 was Rs. 26,000.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ಸ್ವಾಮಿ, (ಎ)ಗೆ ಉತ್ತರವಾಗಿ ಹೌದು ಎಂದು ತಿಳಿಸಿದ್ದೀರಿ. ಈ ಪ್ರಪೋಸಲ್ಸ್ ಯಾವಾಗ ಬಂತು? ಇಷ್ಟು ವಿಳಂಬ ವಿತಕ್ಕೆ ತಿಂತು ಎನೆಂಬುದನ್ನು ತಿಳಿಸಬೇಕು ಮತ್ತು ಈ ಸ್ಕೀಮು ಬಹಳ ಅವಶ್ಯಕತೆ ಇರುವುದರಿಂದ ಇದನ್ನು ಕೂಡಲೇ ಸ್ಯಾಂಕ್ಷನ್ ಮಾಡುತ್ತೀರಾ?

†ಶ್ರೀ ಎನ್. ರಾಚಯ್ಯ.—ಈಗಿನ ಪರಿಸ್ಥಿತಿಯಲ್ಲಿ ಸಮಾಜ ಕಲ್ಯಾಣ ಬೋರ್ಡಿನಲ್ಲಿ ಯಾವುದೇ ಸೌಲಭ್ಯಗಳು ಬಂದರೂ ಕೂಡ ಸಾಮಾನ್ಯವಾಗಿ ನಿಧಾನವಾಗುತ್ತದೆ. ಇದನ್ನು ಸರಿಪಡಿಸುತ್ತೇನೆ. ಮತ್ತು ಈ ಶಾಲೆಯ ವಿಚಾರದಲ್ಲಿ ಸೂಕ್ತವಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಸಾಧ್ಯವಾದರೆ ಈ ವರ್ಷವೇ ಅದನ್ನು ಜಾರಿಗೆ ಮಂಜೂರು ಮಾಡುತ್ತೇನೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ನಾನ್ ಇನ್ಸ್‌ಟಿಟ್ಯೂಷನಲ್ ಸರ್ವಿಸಸ್ ಪ್ರೋಗ್ರಾಂನಲ್ಲಿ ಹೆಚ್ಚು ಖರ್ಚು ಇಲ್ಲದೆ ನೂರಾರು ಮಕ್ಕಳಿಗೆ ಸಹಾಯ ಮಾಡಬಹುದಂಥ ಜುವೆನೈಲ್ ಸರ್ವೀಸಸ್‌ನ್ನು ಇನ್ನೂ ಅನೇಕ ಕಡೆಗಳಲ್ಲಿ ತೆರೆಯುವ ಯೋಜನೆ ಸರ್ಕಾರಕ್ಕೆ ಇದೆಯೆ?

ಶ್ರೀ ಎನ್. ರಾಚಯ್ಯ.— ಸರ್ಕಾರದ ಆ ಒಂದು ಯೋಜನೆಯೂ ಕೂಡ ಇದೆ. ಮತ್ತು ಈ ಯೋಜನೆಯನ್ನು ರಾಜ್ಯದ ಅನೇಕ ಭಾಗಗಳಲ್ಲಿ, ಮುಖ್ಯ ಸ್ಥಳಗಳಲ್ಲಿ ಆಯಾಯ ಮಕ್ಕಳಿಗೆ ಅನುಕೂಲ

ವಾಗುವ ದೃಷ್ಟಿಯಿಂದ ಇದನ್ನು ತೀವ್ರತೆಯಿಂದ ವಿಸ್ತರಣೆ ಮಾಡತಕ್ಕಂಥ ಆಲೋಚನೆ ಸರ್ಕಾರಕ್ಕೆ ಇದೆ.

ಅಧ್ಯಕ್ಷರು :— ಪ್ರಶ್ನೆ ೬೩೨ ಮತ್ತು ೬೮೨ ಇವಕ್ಕೆ ಸಂಬಂಧಪಟ್ಟ ಮಂತ್ರಿಗಳು ಬರಬೇಕಾದುದಕ್ಕಾಗಿ ಬೇರೆ ಯಾವುದಿಲ್ಲ ಎಂದು ನನ್ನ ಹತ್ತಿರ ಹೇಳಿರುವುದರಿಂದ ಈ ಪ್ರಶ್ನೆಗಳನ್ನು ನಾಳೆಗೆ ತೆಗೆದುಕೊಳ್ಳುತ್ತೇನೆ.

COMPENSATION FOR LANDS ACQUIRED FOR MINOR IRRIGATION WORKS

698 SRI PRABHURAJ PATIL.— (Yelburga)

Will the Minister of State of Minor Irrigation be pleased to state.

(*a*) when the minor irregation works of Malakasamudra and Taluk of Yelburga Taluk in Raichur District were started;

(*b*) whether it is not a fact that the ryots voluntarily surrendered their lands for the construction of said tanks with a request to sanction compensation amount early;

(*c*) the steps taken by Government so far to provide compensation to the concerned amount ryots?

SRI S. B. NAGARAL (Minister of State for Minor Irrigation).—

(*a*) In March, 1973.

(*b*) Yes.

(*c*) The acquisition work of the lands required by these works has been entrusted to Revenue Department and compensation amount will be paid soon after award Bill is passed.

ಶ್ರೀ ಪ್ರಭುರಾಜ್ ಪಾಟೀಲ್.— ಸ್ವಾಮಿ, ಈ ಕೆರೆಗಳ ನಿರ್ಮಾಣಕ್ಕೆ ಮುಳುಗಡೆ ಆಗಿರುವ ಜಮೀನಿನ ಕ್ಷೇತ್ರವೆಷ್ಟು?

†ಶ್ರೀ ಎಸ್. ಬಿ. ನಾಗರಾಳ್ — ಮುಳುಗಡೆ ಕ್ಷೇತ್ರವಾಗಿರತಕ್ಕಂಥ ಜಮೀನು ಒಂದರಲ್ಲಿ ೩೨ ಎಕರೆ ೩ ಗುಂಟೆ ಇನ್ನೊಂದರಲ್ಲಿ ೨೨ ಎಕರೆ ೧೩ ಗುಂಟೆ.

ಶ್ರೀ ಪ್ರಭುರಾಜ್ ಪಾಟೀಲ್.— ಈ ಜಮೀನನ್ನು ಕಳೆದುಕೊಂಡಂಥ ಜನರಲ್ಲಿ ಬಹಳ ನಿರ್ಗತಿಕರಾಗಿದ್ದಾರೆ. ಆ ಕೆರೆಯನ್ನು ಕಟ್ಟುವುದಕ್ಕೆ ರೈತರೇ ಬಂದು ತಮ್ಮ ಜಮೀನು ಕೊಟ್ಟರೂ ಅವರಿಗೂ ಕೂಡ ಅವರಿಗೆ ಇದುವರೆಗೂ ಯೋಗ್ಯ ಪರಿಹಾರ ಕೊಟ್ಟಿಲ್ಲ. ಆದುದರಿಂದ ಈ ಜಾಗ್ಗೆ ಅವರಿಗೊಂದು ಪ್ರತ್ಯೇಕವಾದ ಅವಾರ್ಡ್‌ನ್ನಾದರೂ ಮಾಡಿ ಈ ತಿಂಗಳ ಒಳಗಾಗಿ ಅವರಿಗೆ ಹಣ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಬಿ. ನಾಗರಾಳ್.— ಈ ಬಗ್ಗೆ ಅವಾರ್ಡ್ ಮಾಡಿ ಅವರಿಗೆ ಹಣ ಕೊಡಿಸಿ ಎಂದು ಡೆಪ್ಯೂಟಿ ಕಮೀಷನರಿಗೆ ಬರೆದಿದ್ದೇನೆ. ಮತ್ತೆ ಅದನ್ನು ಪೇಸ್ ಮಾಡಿ ಆದಷ್ಟು ಬೇಗ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಶ್ರೀ ಎ. ಡಿ. ಬಿಳಿಗೌಡ ಅವರ ಪ್ರಶ್ನೆಯನ್ನು ಶ್ರೀ ಕೆ. ಪುಟ್ಟಸ್ವಾಮಿ ಅವರು ಕೇಳಬಹುದು.